ಶ್ರೀ ಎಸ್. ಆರ್. ಬೊಮ್ಮಾಯಿ —ಇದರಲ್ಲಿ ವಿಶೇಷತೆ ಇದೆ. ಅಧಿಕಾರ ವಿಕೇಂದ್ರೀಕರಣ ಮಾಡುವುದನ್ನು ನಾವು ಒಪ್ಪಿಕೊಂಡಿದ್ದೇವೆ. ಕೆಲವು ಸಂಸ್ಥೆಗಳಿಗೆ ನಾವು ಅಧಿಕಾರವನ್ನು ಕೊಡುತ್ತೇವೆ. ನಮ್ಮ ರಾಜ್ಯಾಂಗದ ಪ್ರಕಾರ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಕೆಲವೊಂದು ಅಧಿಕಾರಗಳು ಇವೆ. ರಾಜ್ಯ ಸರ್ಕಾರದ ಅಧಿಕಾರದಲ್ಲಿ ಕೇಂದ್ರ ಸರ್ಕಾರ ತೆಗೆದುಹಾಕುವುದಕ್ಕೆ ಬರುವುದಿಲ್ಲ. ಇದು ಒಂದು ಸ್ವತಂತ್ರ ಸಂಸ್ಥೆ. ಇದಕ್ಕೆ ಕಾನೂನು ಪ್ರಕಾರವೇ ಇದೆ ಏನಾದರೂ ತಪ್ಪು ಮಾಡಿದ್ದರೆ ಸಲಹೆಯನ್ನು ಕೊಡಲಾಗುತ್ತದೆ. ಅವುಗಳ ಮೇಲೆ ನಮ್ಮ ಕೊನೇ ಅಸ್ತ್ರ ಎಂದರೆ ಸೂಪರ್‌ಸೀಡ್ ಮಾಡುವುದು. ಹಾಗೇ ರಾಜ್ಯ ಸರ್ಕಾರವನ್ನು ಕಿತ್ತುಹಾಕುವ ಅಧಿಕಾರ ಕೇಂದ್ರಕ್ಕೆ ಇದೆ ಜಿಲ್ಲಾಪರಿಷತ್ ಅನೇಕ ತಪ್ಪುಗಳನ್ನು ಮಾಡಿದರೆ ಅದನ್ನು ರದ್ದು ಮಾಡುವ ಅಧಿಕಾರ ರಾಜ್ಯಕ್ಕೆ ಇದೆ. ತಪ್ಪು ಮಾಡುತ್ತಾರೋ, ಸರಿ ಮಾಡುತ್ತಾರೋ ಇವು ಹೊಸದಾಗಿ ಬಂದಿರುವ ಸಂಸ್ಥೆಗಳು. ಈ ಸಂಸ್ಥೆಗಳನ್ನು ತಿದ್ದತಕ್ಕದ್ದು ಇದೆ. ಈ ಸಂಸ್ಥೆಗಳು ಅಧಿಕಾರಕ್ಕೆ ಬಂದ ಮೇಲೆ ಎವಾಲ್ಯೂಯೇಷನ್ ಕಮಿಟಿ ನೇಮಿಸಿದ್ದೇವೆ. ಈ ಸಂಸ್ಥೆಗಳು ನಡೆದಂತೆ ಏನಾದರೂ ತಿದ್ದುಪಡಿಗಳನ್ನು ಮಾಡುವುದಿದ್ದರೆ ಅವು ಈ ಮನೆಯ ಮುಂದೆ ಬರುತ್ತವೆ. ಇವತ್ತು ಜಿಲ್ಲಾಪರಿಷತ್ ಹಾಗೂ ಮಂಡಲಗಳ ದಿನನಿತ್ಯದ ವ್ಯವಹಾರಗಳ ಬಗ್ಗೆ ಕೆಲವೊಂದು ವಿಚಾರಗಳನ್ನು ನಾವು ಚರ್ಚೆ ಮಾಡುತ್ತಿದ್ದೇವೆ ಈ ಬಗ್ಗೆ ತಾವೂ ಕೂಡಾ ಸಲಹೆಗಳನ್ನು ಮಾಡಬಹುದು. We have to amend wherever it is necessary. ಈಗ ಇರತಕ್ಕ ಕಾನೂನನ್ನು ಜಾರಿಗೆ ಕೊಟ್ಟಿದ್ದೇವೆ. ಇವುಗಳಲ್ಲಿ ಕೆಲವೊಂದು ಬದಲಾವಣೆ ಅವಶ್ಯಕ ಇದ್ದರೆ ಅದನ್ನು ಮಾಡಲು ಸರ್ಕಾರ ಸಿದ್ಧವಿದೆ. ನಮಗೆ ಸಂಪೂರ್ಣವಾದ ವಿಕೇಂದ್ರೀಕರಣದಲ್ಲಿ ನಂಬಿಕೆ ಇದೆ. ಇವತ್ತು ತಪ್ಪು ಮಾಡಿದರೆ ನಾಳೆ ಒಳ್ಳೆಯದು ಆಗುತ್ತದೆ. ಈ ನೀತಿಗೆ ಸರ್ಕಾರ ಬದ್ಧವಾಗಿದೆ.

ಶ್ರೀ ಎಂ ರಾಮಪ್ಪ.—ನಿಮ್ಮ ಕಾನೂನು ಮಾಡುವತನಕ ಎಲ್ಲಾ ಸತ್ತು ಹೋಗಲಿ ಎಂದು ಮಾಡಿದ್ದೀರಾ ?

ಶ್ರೀ ಆರ್. ಎನ್. ನಾಯಕ್ —ಮುಖ್ಯಮಂತ್ರಿಗಳಿಗೆ ಅಧಿಕಾರವಿದೆ, ಜಿಲ್ಲಾಪರಿಷತ್‌ನ ಅಧ್ಯಕ್ಷರುಗಳು ಏನಾದರೂ ತಪ್ಪು ಆದೇಶಗಳನ್ನು ಕೊಟ್ಟರೆ ಅದನ್ನು ಸ್ಟೇ ಕೊಡಲಿಕ್ಕೆ ಅಧಿಕಾರವಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಆ ರೀತಿ ಮಾಡಲಿಕ್ಕೆ ಬರುವುದಿಲ್ಲ. ಕಾನೂನು ಪ್ರಕಾರ ತಾವು ಕೂಡ ಜಿಲ್ಲಾಪರಿಷತ್‌ನ ಸದಸ್ಯರಿದ್ದೀರಿ ನೀವು ಅಲ್ಲಿ ಚರ್ಚೆ ಮಾಡಬೇಕು. ಇದನ್ನು ಸಾರ್ವಜನಿಕರ ಗಮನಕ್ಕೆ ತನ್ನಿ, ತಾವು ಸದಸ್ಯರು ಚರ್ಚೆಮಾಡಿ ಬದಲಾವಣೆ ಮಾಡಿ.

ಶ್ರೀ ಆರ್. ಎನ್. ನಾಯಕ್.—ನಾವು ಜಿಲ್ಲಾಪರಿಷತ್‌ನಲ್ಲಿ ಏನು ಚರ್ಚೆ ಮಾಡಂವುದು ಎಲ್ಲಾ ನಿಮ್ಮ ಹತ್ತಿರನೇ ಇದೆ ಟೀಚರ್ಸ್ ರಿಕ್ರೂಟ್‌ಮೆಂಟ್ ಕಮಿಟಿಯನ್ನು ಮಾಡಿ ಅದು ಸರಿಯಿಲ್ಲ ಎಂದಾಗ ಅದನ್ನು ಸ್ಟೇ ಮಾಡಲಿಲ್ಲವೇ ? ಶಿವಮೊಗ್ಗ ಜಿಲ್ಲಾ ಟೀಚರ್ಸ್ ರಿಕ್ರೂಟ್‌ಮೆಂಟ್ ಕಮಿಟಿಯನ್ನು ರದ್ದು ಮಾಡಲಿಲ್ಲವೇ ?

ಅಧ್ಯಕ್ಷರು.—ಮೂರು ಜನರು ಈ ರೀತಿ ಎದ್ದು ಮಾತನಾಡಿದರೆ ಹೇಗೆ ? ಆ ವಿಷಯ ಆಗಲೇ ಮುಕ್ತಾಯವಾಗಿದೆ. ನೀವು ಒಂದು ಅರ್ಜಿಯನ್ನು ಕೊಡಿ ಅದನ್ನು ಅರ್ಜಿಗಳ ಸಮಿತಿಗೆ ಹಾಕೋಣ. ಇದು ಸರಿಯಲ್ಲ. ಮಂತ್ರಿಗಳು ಸರಿಯಾಗಿ ಉತ್ತರವನ್ನು ಕೊಟ್ಟಿದ್ದಾರೆ. ತಮಗೂ ಕೂಡ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ. ಮಾನ್ಯ ಸದಸ್ಯರಾದ ರಾಮಪ್ಪನವರು ಬೆಲ್‌ನೊಳಗೆ ಬರುವುದು ಸರಿಯಲ್ಲ.

(ಮಾನ್ಯ ಸದಸ್ಯರಾದ ರಾಮಪ್ಪನವರು ಬೆಲ್‌ನೊಳಗೆ ಬಂದು ಸಭಾಧ್ಯಕ್ಷರ ಮುಂಭಾಗಕ್ಕೆ ಬಂದರು.)

ಅಧ್ಯಕ್ಷರು.—ನೀವು ಏನೇ ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಏನಾದರೂ ಅನ್ಯಾಯವಾಗಿದ್ದರೆ ಪೆಟಿಷನ್ ಕಮಿಟಿಗೆ ಅರ್ಜಿ ಹಾಕಿ. ಅವರು ಸರ್ಕಾರಕ್ಕೆ ಅಥಾರಿಟಿಯಿಲ್ಲವೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ದಯವಿಟ್ಟು ಸ್ವಲ್ಪ ಕೇಳಿ, ಕಾನೂನು ಮಾಡತಕ್ಕವರು ನಾವು, ಅದು ಸರಿಯಿಲ್ಲದಿದ್ದರೆ ಅದಕ್ಕೆ ತಿದ್ದುಪಡಿ ತರತಕ್ಕವರು ನಾವೇ ಆ ಅಧಿಕಾರ ಈ ಮನೆಗೆ ಇದೆ.